ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜಾಗ್ರತೆ ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೀರಾ.

ಶ್ರೀ ಎಸ್. ಆರ್. ಕಂಠಿ.—ತೀರ್ಮಾನ ತೆಗೆದುಕೊಳ್ಳುವ ವಿಚಾರವನ್ನು ಸರ್ಕಾರ ಯೋಚನೆ ಮಾಡಬೇಕು.

ಶ್ರೀ ಎಸ್. ಗೋಪಾಲ ಗೌಡ.—ಹಳೆಯ ಮೈಸೂರಿನಲ್ಲಿ ಒಂದು ಗ್ರಾಂಟ್-ಇನ್-ಏಡ್ ಕೋಡ್ ಇದೆ. ಹೊಸದೊಂದನ್ನು ತಯಾರಿಸುತ್ತಿದ್ದೀರಿ. ಹಾಗೆ ಮಾಡುವಾಗ ಹಳೆಯ ಮೈಸೂರಿದಲ್ಲಿದ್ದ ಸೌಲಭ್ಯವನ್ನು ಳಿಸಿ ಬೇರೆ ಭಾಗಗಳಿಗೆ ಕೊಡುವ ಸೌಲಭ್ಯ ದೊರೆಯುವಂತೆ ಮಾಡುತೀರಾ ಅಥವಾ ಇರುವ ಸೌಲಭ್ಯ ಕತ್ತುಹಾಕಿ ಪ್ರತ್ಯೇಕ ಕೋಡ್ ತಯಾರಿಸಲು ಯೋಚಿಸುತ್ತಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಪ್ರೈಮರಿ ವಿದ್ಯಾಭ್ಯಾಸದ ವಿಚಾರವಾಗಿ ಹೇಳುವುದಾದರೆ ಹೊಸ ಕೋಡಿನಿಂದ ಹಳೇ ಮೈಸೂರು ಇಲಾಖೆಗೆ ಲಾಭವಿದೆ. ಆದರೆ ಸ್ಪೆಷಲ್ ಕೋಡ್ ಎಂಬುದೊಂದಿರುತ್ತದೆ. ಅದನ್ನು ಯಾವ ರೀತಿ ಮಾಡಬೇಕು, ಬೇರೆ ಬೇರೆ ಕಡೆ ಬೇರೆ ಬೇರೆ ರೀತಿ ಇದೆ, ಹೇಗೆ ಮಾಡಿದರೆ ಒಳ್ಳೆಯದು ಎಂದು ಸ್ಪೆಷಲ್ ಕೋಡ್ ವಿಚಾರದಲ್ಲಿ ಯೋಚನೆ ಮಾಡುತ್ತಿದ್ದೇವೆ. ಹಳೇ ಮೈಸೂರು ಭಾಗಕ್ಕೆ ಬಹುಶಃ ಯಾವ ತೊಂದರೆಯೂ ಆಗುವುದಿಲ್ಲ ಎಂದು ಕಾಣುತ್ತದೆ.

Construction of a Primary Health Unit at Mudigere Village in Channapatna Taluk.

* *Q.*—78. Sri B. J. LINGE GOWDA (Channapatna).—

Will the Government be pleased to state:—

(*a*) the date on which the foundation was laid for the construction of a Primary Health Unit at Mudigere Village in Channapatna Taluk;

(*b*) the action taken for constructing the said building ?

A.—Sri K. NAGAPPA ALVA (Minister for Health).—

(*a*) 25th February 1963.

(*b*) Plans and estimates for the construction of buildings have been prepared and a site has been selected.

ಶ್ರೀ ಬಿ. ಜೆ. ಲಿಂಗೇಗೌಡ.—25-2-63 ರಲ್ಲಿ ಅಸ್ತಿಭಾರ ಹಾಕಿದರೂ ಕಟ್ಟಡದ ಕೆಲಸವನ್ನೇಕೆ ಪ್ರಾರಂಭಿಸಿಲ್ಲ ?

ಶ್ರೀ ಕೆ. ನಾಗಪ್ಪ ಆಳ್ವ.—ಬಡ್ಜೆಟ್ ಕಡಿತದಿಂದ ಕಟ್ಟಡದ ಕೆಲಸ ಪ್ರಾರಂಭಿಸುವುದಕ್ಕಾಗಿಲ್ಲ.

ಶ್ರೀ ಬಿ. ಜೆ. ಲಿಂಗೇಗೌಡ.—ಕಟ್ಟಡಕ್ಕಾಗಿ 3 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಡ್ಜೆಟ್ಟಿನಲ್ಲಿ ಹಣವಿಲ್ಲದಿರುವಾಗ ಅಸ್ತಿಭಾರ ಹಾಕುವುದರ ಅಭಿಪ್ರಾಯವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಬಡ್ಜೆಟ್ಟಿನಲ್ಲಿ ಹಣದ ಕಡಿತ ಕಡಿಮೆ ಆಗಿದೆ.

ಶ್ರೀ ಬಿ. ಭಾನ್ಕರಶೆಟ್ಟಿ.—1962 ರಲ್ಲಿ ಅಸ್ತಿಭಾರ ಹಾಕಿ ಇನ್ನೂ ಕಟ್ಟಡ ಕಟ್ಟದಿರುವ ಸಂದರ್ಭಗಳಿವೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸುತ್ತೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಏಪ್ರಿಲ್ ನಂತರ ಪ್ರಾರಂಭಿಸಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಂದಾಜು ಮಂಜೂರಾಗಿ ಟೆಕ್ನಿಕಲ್ ಸ್ಯಾಂಕ್ಷನ್ ಆದಮೇಲೆ ಮತ್ತು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆದಮೇಲೆ ಅಸ್ತಿಭಾರ ಹಾಕಬೇಕು. ಹಾಗೆ ಮಾಡದಿದ್ದರೆ ಕಟ್ಟಡದ ಕೆಲಸವಾಗಲು ಸಾಧ್ಯವೆ ?

ಶ್ರೀ ಕೆ. ನಾಗಪ್ಪ ಆಳ್ವ.—ಆದು ಕೆಲಸದಮೇರೆ ಹೊಂದಿಕೊಂಡು ಹೋಗುತ್ತದೆ. ಸಾಧ್ಯ ವಿರುವಷ್ಟನ್ನು ಮಾಡುತ್ತೇವೆ.

ಶ್ರೀ ಜಿ. ರಾಮೇಗೌಡ.—ರಾಜ್ಯದಲ್ಲೆಲ್ಲಾ ಪ್ರೈಮರಿ ಹೆಲ್ತ್ ಯೂನಿಟ್ಟಿಗೆ ಒಂದೇ ಟೈಪ್ ಡಿಸೈನ್ ಇದೆಯೋ ಅಥವಾ ಒಂದೊಂದು ತಾಲ್ಲೂಕಿಗೇ ಬೇರೆ ಬೇರೆ ಇದೆಯೋ ?

ಶ್ರೀ ಕೆ. ನಾಗಪ್ಪ ಆಳ್ವ.—ಇರುವುದನ್ನು ಸ್ವಲ್ಪಮಟ್ಟಿಗೆ ಹೆಚ್ಚುಕಡಮೆ ಮಾಡಿಕೊಳ್ಳಲು ಸಾಧ್ಯವಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಪ್ರೈಮರಿ ಹೆಲ್ತ್ ಸೆಂಟರುಗಳಿಗೆ ರಾಜ್ಯದ ಪಾಲಿನ ಧನ ಸಹಾಯ ವೆಷ್ಟು ? ಪಬ್ಲಿಕ್‌ಡೋನೇಷನ್ ಎಷ್ಟು ? ಕೇಂದ್ರ ಸರ್ಕಾರದ ಸಹಾಯವೆಷ್ಟು ?

ಶ್ರೀ ಕೆ. ನಾಗಪ್ಪ ಆಳ್ವ.—ಪಬ್ಲಿಕ್ ಕಾಂಟ್ರಿಬ್ಯೂಷನ್ 12,500 ರೂಪಾಯಿಗಳು ಕೇಂದ್ರ ಸರ್ಕಾರದ ಕಾಂಟ್ರಿಬ್ಯೂಷನ್ 65,000 ರೂಪಾಯಿಗಳು ಉಳಿದುದನ್ನು ರಾಜ್ಯ ಸರ್ಕಾರ ಹಾಕ ಬೇಕು.

Sri C. J. MUCKANNAPPA.—Will the Government hereafter at least think of laying foundation stones only after technical and administrative sanctions are given to that work ?

Sri K. NAGAPPA ALVA.—Only after the technical sanction is given, foundation stones are laid, Sir.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಕಚ್ಚೋಡದ ಸಂಬಂಧದಲ್ಲಿ ಕೇಂದ್ರದ ಪಾಲು ಹೆಚ್ಚಾಗಿರುವುದ ರಿಂದ ಈ ವರ್ಷದೊಳಗಾಗಿ ಕಟ್ಟದಿದ್ದರೆ ಅದು ಕೈ ತಪ್ಪಿ ಹೋಗುವುದಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ.

ಶ್ರೀ ಗಂಗಾಧರ ನಾಯಕ್.—ಟೆಕ್ನಿಕಲ್ ಮತ್ತು ಫೈನಾನ್‌ಷಿಯಲ್ ಸ್ಯಾಂಕ್ಷನ್ ಇಲ್ಲದೆ ಅಸ್ತಿಭಾರ ಹಾಕಿದರೆ ಆ ಖರ್ಚು ಯಾವ ಖಾತೆಗೆ ಬುಕ್ಕಾಗುತ್ತದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಸಮಾಚಾರ ನನ್ನ ಬಳಿ ಇಲ್ಲ.

Breach of Tank of Halapoor Village in Sathanoor Hobli, Kanakapura Taluk.

*Q.—82. Sri K. L. SHIVALINGE GOWDA (Virupakshipura).—

Will the Government be pleased to state :—

(*a*) whether it has come to their notice that the Tank of Halapoor Village, Sathanoor Hubli, Kanakapura Taluk has been breached due to untimely heavy rains ;

(*b*) whether it has come to their notice that the entire achkat under the said tank has been damag d ;

(*c*) whether it has also come to their notice that the ryots are put to hardship due to this loss ;

(*d*) whether any other relief measures are proposed to be undertaken in order to help these ryots ?

A.—Sri M. V. KRISHNAPPA (Minister for Revenue).—

(*a*) The tank breached on the night of 23rd September 1963.

(*b*) The crops under the achkat have not suffered except to an extent of about 3 Acres.

(*c*) No.

(*d*) No.